## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:**- ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ತುರುವೇಕರೆ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

**ಓದಲಾಗಿದೆ:** 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/1863/2012/ಎಆರ್‌ಇ-6, ದಿನಾಂಕ: 22.10.2016

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಬಿಡಿ/1863/2012/ಎಆರ್‌ಇ-6, ದಿನಾಂಕ: 03.11.2016.

**ಪ್ರಸ್ತಾವನೆ:**

****

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ತುರುವೇಕರೆ ತಾಲ್ಲೂಕು ಪಂಚಾಯತ್ ವ್ಯಾಪ್ತಿಯ ಕೂಡಿಗೆಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2009-11ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಕೈಗೊಂಡ ಕಾಮಗಾರಿಗಳಲ್ಲಿ ಅವ್ಯವಹಾರ ಆಗಿರುತ್ತದೆಂದು ಆರೋಪಿಸಿ ಈ ಕೆಳಕಂಡ ಅಧಿಕಾರಿ/ಅಧಿಕಾರೇತರರುಗಳ ವಿರುದ್ಧ ಶ್ರೀ ಚಂದ್ರಶೆಟ್ಟಿ ತಂದೆ ಸನ್ನದಿಮ್ಮಶೆಟ್ಟಿ, ಕಲ್ಕೆರೆ, ಕೂಡಿಗೆಹಳ್ಳಿ ಅಂಚೆ, ಕಸಬಾ ಹೋಬಳಿ, ತುರುವೇಕೆರೆ ತಾಲ್ಲೂಕು, ನೀಡಿದ್ದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 9 ರನ್ವಯ ತನಿಖೆಗೆ ಕೈಗೆತ್ತಿಕೊಳ್ಳಲಾಗಿರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ನಮೂದಿಸಲಾಗಿರುತ್ತದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಜಲಕೃಷ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ | 1 |
| 2 | ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ, ಕಾರ್ಯನಿರ್ವಾಹಕ ಅಧಿಕಾರಿ | 2 |
| 3 | ಶ್ರೀ ಉಮೇಶ್ ಕೆ.ಪಿ., ಸಹಾಯಕ ಇಂಜಿನೀಯರ್, | 3 |
| 4 | ಶ್ರೀ ಸಿದ್ದಗಂಗಯ್ಯ.ವಿ., ಸಹಾಯಕ ಇಂಜಿನೀಯರ್, | 4 |
| 5 | ಶ್ರೀ ಜಯಮ್ಮ, ಮಾಜಿ ಅಧ್ಯಕ್ಷರು, ಕೂಡಿಗೆ ಹಳ್ಳಿ ಗ್ರಾಮ ಪಂಚಾಯತಿ. | 5 |
| 6 | ಶ್ರೀ ಮಹೇಂದ್ರ, ಮಾಜಿ ಅಧ್ಯಕ್ಷರು, ಪ್ರಸ್ತುತ ಸದಸ್ಯರು, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ ಸದಸ್ಯರು. | 6 |
| 7 | ಶ್ರೀ ಹೊನ್ನಪ್ಪ ಹೆಚ್.ಎ., ಮಾಜಿ ಅಧ್ಯಕ್ಷರು, ಪ್ರಸ್ತುತ ಸದಸ್ಯರು, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ ಸದಸ್ಯರು. | 7 |
| 8 | ಶ್ರೀ ಜಯಮ್ಮ, ಮಾಜಿ ಅಧ್ಯಕ್ಷರು, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ ಸದಸ್ಯರು. | 8 |
| 9 | ಶ್ರೀ ವಿಜಯಣ್ಣ. ಜಿ.ಎಮ್., ಕಾರ್ಯದರ್ಶಿ, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ. | 9 |
| 10 | ಶ್ರೀ ಸಾವಿತ್ರಮ್ಮ ಹೆಚ್.ಆರ್. ಕಾರ್ಯದರ್ಶಿ, ಕೂಡಿಗೆಹಳ್ಳಿ ಗ್ರಾಮಪಂಚಾಯತಿ | 10 |
| 11 | ಶ್ರೀ ರಂಗನಾಥ್ ಹೆಚ್.ಎಸ್., ಬಿಲ್ ಕಲೆಕ್ಟರ್, ಕೂಡಿಗೆಹಳ್ಳಿ ಗ್ರಾಮಪಂಚಾಯತಿ. | 11 |

ದೂರುದಾರರ ದೂರಿನ ಬಗ್ಗೆ ಪ್ರಕರಣದ ಕುರಿತಂತೆ ಲೋಕಾಯುಕ್ತ ಸಂಸ್ಥೆಯ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಇವರಿಂದ, ತನಿಖೆಯನ್ನು ನಡೆಸಿ, ಪಡೆಯಲಾದ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ವರದಿಯಲ್ಲಿ ನಮೂದಿಸಲಾಗಿರುತ್ತದೆಂದು ಮಾನ್ಯ ಉಪಲೋಕಾಯುಕ್ತರ ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ.

1. Relating to the work of Planting samplings in the ground of Kodagehalli Govt high school and infront of temple an amount of Rs. 46,260/- was found mis appropriated for which R13 Siddagangaiah, R12. S. Marulappa, R9. Vijayanna, R6 B.Mahendra and R2.Sri Prakash H.K were responsible.
2. Road development work from Mrasakottige to SC Colony an amount of Rs. 23,600/- is found misappropriated on account of substandard work for which R3 K.P.Umesh, R9 G.M.Vijayanna,R6, Sri, D.Mahendra and R2.Sri H.K.Prakash are found responsible.
3. Development work of the road from Kalkere village to Chinnarikatte an amount of Rs. 31,750/- was found misappropriated on account of substandard works for which R3 K.P. Umesh, R9 G.M. Vijayanna, R6, Sri, D.Mahendra and R2. Sri H.K.Prakash are found responsible.
4. Road Development from Kalkere gate to Jogipalya road an amount of Rs 25,000/- is found misappropriated an account of substandard work for which R3 K.P.Umesh, R9. G.M. Vijayanna, R6. Sri D.Mahendra and R2. Sri. H.K.Prakash are found responsible.

ತನಿಖಾಧಿಕಾರಿಯಿಂದ ವಿಚಾರಣಾ ವರದಿಯನ್ನು ಸ್ವೀಕರಿಸಿದ ನಂತರ ಈ ಕೆಳಕಂಡ ಅಧಿಕಾರಿ/ನೌಕರರುಗಳನ್ನು ಎದುರದಾರರು 12-13 ಎಂದು ಸೇರಿಸಿಕೊಂಡು ತನಿಖಾ ವರದಿ/ ದೂರನ್ನು ಎದುರುದಾರರು 1 ರಿಂದ 13 ರವರಿಗೆ ಕಳುಹಿಸಿ ತಮ್ಮ ಉತ್ತರವನ್ನು ನೀಡುವಂತೆ ಸೂಚಿಸಲಾಗಿದ್ದು, ಇದಕ್ಕೆ ಪ್ರತಿಯಾಗಿ ಎದುರುದಾರರು ಉತ್ತರವನ್ನು ಸಲ್ಲಿಸಿ ವಿಚಾರಣಾ ವರದಿಯಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆಂದು ಎದುರುದಾರರು-5 ರವರು ಉತ್ತರವನ್ನು ಸಲ್ಲಿಸಿ, ತಾವು ದಿನಾಂಕ: 09.03.2012 ರಿಂದ 08.05.2015ರ ಅವಧಿಯಲ್ಲಿ ಅಧ್ಯಕ್ಷರಾಗಿದ್ದು, ಸದರಿ

ಪ್ರಕರಣವು ತಮಗೆ ಸಂಬಂಧಿಸಿರುವುದಿಲ್ಲವೆಂದು, ತಿಳಿಸಿರುತ್ತಾರೆಂದು, ಮತ್ತು ಎದುರುದಾರರು-6 ರವರು ಇವರು ದಿನಾಂಕ: 24.06.2010 ರಿಂದ 01.03.2015ರ ವರೆಗೂ ಅಧ್ಯಕ್ಷ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಪ್ರಸ್ತುತ ಅವರು ಯಾವುದೇ ಹುದ್ದೆಯನ್ನು ಹೊಂದಿರುವುದಿಲ್ಲವೆಂದು ತಿಳಿಸಲಾಗಿರುತ್ತದೆ. ಹಾಗೂ ಎದುರುದಾರರು-12 ರವರಾದ ಹಿಂದಿನ ಆರ್.ಎಫ್.ಓ. ರವರು ದಿನಾಂಕ: 28.02.2014 ರಂದು ವಯೋನಿವೃತ್ತಿ ಹೊಂದಿರುತ್ತಾರೆಂದು, ತಿಳಿಸುತ್ತಾ, ಎದುರುದಾರರು 1, 4, 7, 8, 10, 11, ಇವರುಗಳಿಗೆ ಸಂಬಂಧಿಸಿದಂತೆ ತನಿಖಾ ವರದಿಯಲ್ಲಿ ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರ ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಎಸ್.ಮರುಳಪ್ಪ, ಆರ್.ಎಫ್.ಓ., ಅರಣ್ಯ ಇಲಾಖೆ, ತುರುವೇಕೆರೆ ವಿಭಾಗ, ತುಮಕೂರು. | 12 |
| 2 | ಶ್ರೀ ಸಿದ್ದಗಂಗಯ್ಯ, ಅರಣ್ಯ ರಕ್ಷಕ, ಅರಣ್ಯ ಇಲಾಖೆ, ತುರುವೇಕೆರೆ ವಿಭಾಗ, ತುಮಕೂರು. | 13 |

**ತನಿಖಾ ವರದಿ ಮತ್ತು ದಾಖಲೆಗಳಗಳ ಪ್ರಕಾರ ಈ ಕೆಳಕಂಡ ಆರೋಪಗಳು ಸಾಭಿತಾಗಿರುತ್ತವೆಂದು ಕಂಡು ಬರುತ್ತದೆ ಎಂದು ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ನಮೂದಿಸಲಾಗಿದೆ.**

1. R2 Sri. Prakash H.K, R6 Sri B.Mahendra, R9 Sri Vijayanna, R12 Sri.S.Marulappa and R13 Sri.Siddagangaiah are responsible for misappropraition of an amount of Rs.46,260/- in respect of work of planting samplings in the ground of Kodagehalli Government high school and infront of temple.
2. R2 Sri H.K.Prakash, R3 Sri K.P.Umesh, R6 Sri. D.Mahendra and R9 G.M.Vijayanna are responsible for the misappropriation of an amount of Rs. 23,600/- in respect of work of Road development work from Mrasakottige to SC colony.
3. R2. Sri. H.K.Prakash, R3, Sri K.P. Umesh, R6 Sri. D.Mahendra and R9 Sri G.M.Vijayanna are responsible for misappropriation of Rs.

31,750/- in respect of work of Development work of the road from Kalkere village to Chinnarikatte.

4. R2. Sri.H.K.Prakash, R3, Sri.K.P.Umesh, R6. Sri. D.Mahendra and R9 Sri. G.M.Vijayanna are responsible for the work of Raod development from Kalkere gate to Jogipalya road.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಕೆಳಕಂಡ ಎದುರುದಾರರುಗಳು 2, 3 9 ಮತ್ತು 13 ರವರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ, ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ಅಪರ ನಿಬಂಧಕರು, ರವರು ಕೋರಿರುತ್ತಾರೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಹೆಚ್.ಕೆ.ಪ್ರಕಾಶ್, ಹಿಂದಿನ, ಕಾರ್ಯನಿರ್ವಾಹಕ ಅಧಿಕಾರಿ | 2 |
| 2 | ಶ್ರೀ ಉಮೇಶ್ ಕೆ.ಪಿ., ಸಹಾಯಕ ಇಂಜಿನೀಯರ್, | 3 |
| 3 | ಶ್ರೀ ವಿಜಯಣ್ಣ. ಜಿ.ಎಮ್., ಕಾರ್ಯದರ್ಶಿ, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ. | 9 |
| 4 | ಶ್ರೀ ಸಿದ್ದಗಂಗಯ್ಯ, ಅರಣ್ಯ ರಕ್ಷಕ, ಅರಣ್ಯ ಇಲಾಖೆ, ತುರುವೇಕೆರೆ ವಿಭಾಗ, ತುಮಕೂರು. | 13 |

ಅಧಿಕಾರೇತರರಾದ ಎದುರುದಾರರು-6, ಶ್ರೀ ಬಿ.ಮಹೇಂದ್ರ, ಹಿಂದಿನ ಅಧ್ಯಕ್ಷರು, ಪ್ರಸ್ತುತ ಸದಸ್ಯರು ಕೋಡಿಗೆಹಳ್ಳಿ ಗ್ರಾಮ ಪಂಚಾಯತಿ. ಇವರು ಸದರಿ ಅವಧಿಯಲ್ಲಿ ಕರ್ತವ್ಯಲೋಪವೆಸಗಿರುತ್ತಾರೆಂದು ತನಿಖಾಧಿಕಾರಿಯಾದ ಶ್ರೀ ಜಿ.ಪ್ರಸನ್ನಕುಮಾರ್, ಸಹಾಯಕ ಇಂಜಿನಿಯರ್, ಇವರು ತಾಂತ್ರಿಕ ವಿಭಾಗಕ್ಕೆ ದಿನಾಂಕ: 20.12.2013 ವರದಿಸಿರುತ್ತಾರೆಂದು, ಸದರಿಯವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ, ಕ್ರಮ ಕೈಗೊಳ್ಳುಂತೆಯೂ ಸಹ, ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಶಿಫಾರಸ್ಸು ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 13 ರವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಎದುರುದಾರರು-13 ರವರಾದ ಶ್ರೀ ಸಿದ್ದಗಂಗಯ್ಯ, ಇವರು ಅರಣ್ಯ ಇಲಾಖೆಯ ಸೇವೆಗೆ ಸೇರಿದ ನೌಕರರಾಗಿದ್ದು, ಇವರ ವಿರುದ್ಧದ ಆರೋಪಗಳ ಸಂಬಂಧ, ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನಂತೆ, ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಇಲಾಖಾ ವಿಚಾರಣೆಯನ್ನು ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ) ರನ್ವಯ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲು ಅಗತ್ಯ ಕ್ರಮವಹಿಸುವಂತೆ ಅಧಿಕಾರಿಯ ಮಾತೃ ಇಲಾಖೆಯಾದ ಅರಣ್ಯ ಇಲಾಖೆಯನ್ನು ದಿನಾಂಕ:25.01.2017 ರ ಅ.ಟಿ.ಯಲ್ಲಿ ಕೋರಲಾಗಿರುತ್ತದೆ.

ಅಧಿಕಾರೇತರರಾದ ಎದುರುದಾರರು-6, ಬಿ.ಮಹೇಂದ್ರ, ಕೋಡಿಗೆಹಳ್ಳಿ ಗ್ರಾಮ ಪಂಚಾಯತಿ ಹಿಂದಿನ ಅಧ್ಯಕ್ಷರು, (ಪ್ರಸ್ತುತ ಸದಸ್ಯರು) ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ವಯ, ಕ್ರಮ ಕೈಗೊಳ್ಳಲು ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರೆ ದಾಖಲಾತಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ನಿರ್ದೇಶಕರು ಪಂ.ರಾಜ್-1 ರವರಿಗೆ ದಿನಾಂಕ:27.01.2017 ರ ಅ.ಟಿ.ಯಲ್ಲಿ ಕೋರಲಾಗಿರುತ್ತದೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಶಿಫಾರಸ್ಸು ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 2, 3 ಮತ್ತು 9 ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಮಾನ್ಯ ಉಪ ಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ 1984ರ ಕಲಂ 12(3) ರನ್ವಯ, ಮಾಡಿರುವ ಶಿಫಾರಸ್ಸಿನಂತೆ,

ಸದರಿ ಅಧಿಕಾರಿಗಳ ವಿರುದ್ದದ ಆರೋಪಗಳ ಸಂಬಂಧ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪಲೋಕಾಯುಕ್ತ ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 260 ವಿಸೇಬಿ 2016 ಬೆಂಗಳೂರು ದಿನಾಂಕ: 27-01-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ ಅಧಿಕಾರಿ/ನೌಕರರ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀ ಹೆಚ್.ಕೆ. ಪ್ರಕಾಶ್, ಹಿಂದಿನ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ತುರುವೇಕೆರೆ | 2 |
| 2 | ಶ್ರೀ ಉಮೇಶ್ ಕೆ.ಪಿ, ಸಹಾಯಕ ಇಂಜಿನೀಯರ್, | 3 |
| 3 | ಶ್ರೀ ವಿಜಯಣ್ಣ. ಜಿ.ಎಮ್, ಕಾರ್ಯದರ್ಶಿ, ಕೂಡಿಗೆಹಳ್ಳಿ ಗ್ರಾಮ ಪಂಚಾಯತಿ. | 9 |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

27/01/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1) ಮಹಾಲೇಖಪಾಲರು(ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ)ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-01

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ತುಮಕೂರು.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01.

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.